ರಾಣಿ ಪದ್ಮಿನಿ ಬೇಸಿಗೆ ಅರಮನೆ





ಚಿತ್ತೋರಗಢ ಕೋಟೆ



ವಿಜಯ ಸ್ಥಂಭ

ಮಹಿಳೆಯರು ‘ಜೌಹರ್’ಮಾಡಿಕೊಂಡರು. ಅಂದರೆ ಸತಿ ಹೋದರು. ಕೋಟೆ ಪ್ರತಿ ಸಲ ದಾಳಿಗೊಳಗಾದರೂ ಮತ್ತೆ ನವೀಕರಣಗೊಳ್ಳುತ್ತಿತ್ತು.

ಕೋಟೆ ಒಳಕ್ಕೆ ಸುತ್ತಾಡಿದಾಗ ರಜಪೂತರ ಗತವೈಭವ ಕಣ್ಣಿಗೆ ಕಟ್ಟಿದಂತಾಗುತ್ತದೆ. ಕೋಟೆಗೆ ಕಲ್ಲುಗಳಿಂದ ಕಟ್ಟಿದ ಗಟ್ಟಿಮುಟ್ಟಾದ ಸುಮಾರು ಏಳು ಹೆಬ್ಬಾಗಿಲುಗಳಿವೆ. ಕೋಟೆಯೊಳಗೆ ಅರಮನೆಗಳು, ಹಲವು ಮಂದಿರಗಳು ಮತ್ತು ಎರಡು ವಿಜಯ ಸ್ಥಂಭಗಳಿವೆ. ಇನ್ನೂ ಜನವಸತಿ ಇದೆ.

**ರಾಣಾ ಕುಂಭನ ಅರಮನೆ:** ಹಲವು ಬಾಲ್ಕನಿಗಳುಳ್ಳ ಸುಂದರ ಅರಮನೆ ಈಗ ಜೀರ್ಣಾವಸ್ಥೆಯಲ್ಲಿದೆ. ಕುದುರೆ, ಆನೆಗಳ ಕೊಟ್ಟಿಗೆ ಮತ್ತು ಶಿವನ ಮಂದಿರ ಇಲ್ಲಿತ್ತು. ಕಲ್ಲು ಮತ್ತು ಸುಣ್ಣದ ಗಾರೆಯಿಂದ ನಿರ್ಮಾಣಗೊಂಡ ಈ ಕಟ್ಟಡಕ್ಕೆ ಸಂಬಂಧಿಸಿದಂತೆ ಕಥೆಗಳಿವೆ. ಉದಯಪುರವನ್ನು ಕಟ್ಟಿಸಿದ, ಮೇವಾಡ ರಾಜ ‘ಮಹರಾಣಾ ಉದಯ್ ಸಿಂಗ್’ ಹುಟ್ಟಿದ್ದು ಇಲ್ಲಿಯೇ. ‘ಪನ್ನಾ ಬಾಯಿ’ ಕಥೆ ತುಂಬ ಪ್ರಸಿದ್ಧ. ಶಿಶುವಾಗಿದ್ದ ಮಹರಾಣ ಉದಯ್ ಸಿಂಗ್‌ನನ್ನು ಶತ್ರುಗಳಿಂದ ಉಳಿಸಲು ಪನ್ನಾ ಬಾಯಿ ತನ್ನ ಮಗುವನ್ನೇ ಬಲಿಕೊಟ್ಟ ಘಟನೆ ನಡೆದ ಸ್ಥಳವಿದು. ರಾಣಿಯಾಗಿಯೂ ಸಂತಳಾಗಿದ್ದ ಮೀರಾ ಬಾಯಿ ಬಾಳಿದ ಅರಮನೆಯಿದು. ಅರಮನೆಗೆ ನೆಲಮಾಳಿಗೆ ಇದೆ. ಪದ್ಮಿನಿಯು ಇಲ್ಲಿ ಸತಿ ಹೋದಳಂತೆ. ರಾಜ ಪರಿವಾರದವರ